ದಿನಾಂಕಃ 21-02-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದಃ**

ದಾವಾಸ್ತಿಯ ಸರ್ವೆ ನಂ ಪಾಲುಪಾರಿಕತ್ತು ಆಗುವ ಪೂರ್ವದಲ್ಲಿ 37 ಎಂದು ಇದ್ದು. ಪ್ರಸ್ತುತ 37/2 ಎಂದು ಆಗಿದೆ. ಸರ್ವೆ ನಂ 37 ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ಸರ್ವೆ ನಂ 37 ರ ಜಮೀನು ಮೂಲತಃ ಸರ್ಕಾರಿ ಅರಣ್ಯ ಇಲಾಖೆಗೆ ಸಂಬಂಧಿಸಿದ ಜಮೀನು ಎಂದರೆ ಸರಿಯಲ್ಲ. ಸರ್ವೆ ನಂ 37 ರಲ್ಲಿ ಗ್ರಾಮ, ರಸ್ತೆ, ಮನೆಗಳು ಬರುತ್ತದೆ ಎಂದರೆ ಸರಿ. ಸರ್ವೆ ನಂ 37 ರಲ್ಲಿ ಗ್ರಾಮಕ್ಕೆ, ರಸ್ತೆಗೆ ಮತ್ತು ಮನೆಗಳಿಗೆ ಎಷ್ಟು ಜಮೀನುಗಳು ಹೋಗಿದೆ ಎಂದು ನನಗೆ ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ ಎಂದರೆ ಸರಿ.

ದಾವಾಸ್ತಿಯನ್ನು ನಾನು ಆನೆಪ್ಪನವರಿಂದ ಖರೀದಿಸಿದ್ದು ಸದರಿ ಆನೇಪ್ಪನವರಿಗೆ ದಾವಾಸ್ತಿ ಯಾವ ರೀತಿ ಬಂದಿತ್ತು ಎಂದು ನನಗೆ ಗೊತ್ತಿಲ್ಲ. ಆನೆಪ್ಪನವರಿಂದ ನಮ್ಮ ತಂದೆಯ ಹೆಸರಿಗೆ 12-12-1980 ರಂದು ಖರೀದಿಸಿರುತ್ತೇವೆ. ಸದರಿ ಸಮಯಕ್ಕೆ ಸರ್ವೆ ನಂ 37 ರಲ್ಲಿ 5 ಎಕರೆ 1 ಗುಂಟೆ ಜಮೀನನ್ನು ಖರೀದಿಸಿರುತ್ತೇವೆ. ಸದರಿ ಖರೀದಿಸುವ ಸಮಯಕ್ಕೆ ಸರ್ವೆ ಸ್ಕೇಚ್ ನ್ನು ಮಾಡಿಸಿರುತ್ತೇವೆ ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ತದ ನಂತರ ಪಾಲುಪರಿಕತ್/ನಿಪಿ-2 ರ ಸಮಯಕ್ಕೆ ಸರ್ವೆ ಸ್ಕೇಚ್ ಮಾಡಿಸಿರುತ್ತೇವೆ. ಸದರಿ ನಿಪಿ-2 ರಂತೆ ಪರ್ವತಪ್ಪನವರಿಗೆ/ವಾದಿಯ ಪಾಲಿಗೆ 1 ಎಕರೆ 17 ಗುಂಟೆ, 3 ಗುಂಟೆ ಮತ್ತು 3 ಗುಂಟೆ ಕರಾಬು ಬಂದಿರುತ್ತದೆ. ನಾನು ಸಹ ಸದರಿ ನಿಪಿ-2 ರ ಪಕ್ಷಗಾರನಾಗಿದ್ದು ನನಗೂ ಸಹ ಸದರಿ ಪತ್ರದಂತೆ 1 ಎಕರೆ 1 ಗುಂಟೆ ಮತ್ತು 3 ಗುಂಟೆ ಬಂದಿರುತ್ತದೆ. ಅದರಂತೆ ಸರ್ವೆ ನಂ 76 ರಲ್ಲಿ 4 ಜನರಿಗೂ ಹಿಸ್ಸಾ ಆಗಿರುತ್ತದೆ.

ವಾದಿ ಈ ದಾವೆಯನ್ನು ಹೂಡುವ ಸಮಯಕ್ಕೆ ನಾನು ವಾದಿಯೊಂದಿಗೆ ಹಾಜರಿದ್ದೆ. ಸದರಿ ವಾದಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷ ನುಡಿಯಲು ತೊಂದರೆಯಿದೆಯೇ ಎಂದರೆ ಸಾಕ್ಷಿ ಸದರಿ ವಾದಿ ಕೋಮಾ ಸ್ಥಿತಿಯಲ್ಲಿದ್ದಾರೆ ಎಂದು ನುಡಿಯುತ್ತಾರೆ. ಸದರಿಯವರು ಕೋಮಾ ಸ್ಥಿತಿಂಸಿಯನ್ನು ತಲುಪಿ 3 ವರೆ ತಿಂಗಳು ಆಗಿರುತ್ತದೆ. ಸದರಿಯವರು ಕೊನೆಯ ಬಾರಿಗೆ ನ್ಯಾಯಾಲಯಕ್ಕೆ ಡಿಸೆಂಬರ್-2023 ರಲ್ಲಿ ಬಂದಿರುತ್ತಾರೆ. ನಿಪಿ-2 ರಂತೆ ಹಿಸ್ಸಾ ಆದನಂತರ ಹಿಸ್ಸಾ ಪೋಡಿ ಸರ್ವೆಯಾಗಿದೆ ಎಂದರೆ ಸರಿ. ಸದರಿ ಹಿಸ್ಸಾ ಪೋಡಿ ಸರ್ವೆಯಂತೆ ಅವರವರ ಹಿಸ್ಸೆಯ 4 ಎಲ್ಲೆಗಳನ್ನು ಗುರುತಿಸಿ, ಬಾಂದ್ ಗಲ್ ನ್ನು ಹಾಕಿರುತ್ತಾರೆ ಎಂದರೆ ಸರಿ. ಸರಿದ ಹಿಸ್ಸಾ ಪೋಡಿ ಸರ್ವೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಕಲು ನಮಗೇನು ತೊಂದರೆಯಿದೆಯೇ ಎಂದರೆ ಸಾಕ್ಷಿ ಸದರಿ ದಾಖಲೆಯನ್ನು ಈಗಾಗಲೇ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ, ಸಾಕ್ಷಿಗೆ ಈಗ ತಮ್ಮ ಪರವಾಗಿ ನಿಶಾನೆಗೊಳಪಡಿಸಿದ ದಾಖಲೆಗಳನ್ನು ತೋರಿಸಲಾಗಿ ಸದರಿ ಪಟ್ಟಿಯಲ್ಲಿ ಹಿಸ್ಸಾಪೋಡಿ ಸರ್ವೆ ದಾಖಲೆ ಇಲ್ಲದೆ ಇರುವುದನ್ನು ನೋಡಿ ಖಚಿತಪಡಿಸಿಕೊಂಡಿರುತ್ತಾರೆ. ನಾನು ಉದ್ದೇಶಪೂರ್ವಕವಾಗಿಯೇ ಸದರಿ ಹಿಸ್ಸಾ ಪೋಡಿ ಸರ್ವೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ 76 ಮಲ್ಲೀಗೆರೆ

ಗ್ರಾಮ ನಕಾಶೆಯಲ್ಲಿ ಎಲ್ಲಿದೆ ಎಂದು ಉಲ್ಲೇಖವಿದೆ ಎಂದರೆ ಸರಿ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ ಮಲ್ಲಿಗೆರೆ ಗ್ರಾಮದ ಗ್ರಾಮ ನಕಾಶೆಯಾಗಿದ್ದು ಸದರಿ ನಕಾಶೆಯಲ್ಲಿ ಸರ್ವೆ ನಂ 76 ಎಲ್ಲಿ ಬರುತ್ತದೆ ಎಂದು ಉಲ್ಲೇಖಿಸಿರುತ್ತಾರೆ ಎಂದರೆ ಸರಿ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿ ಒಪ್ಪಿದ ಮೇರೆಗೆ ಅದನ್ನು **ನಿಡಿ-1** ಎಂದು ಗುರುತಿಸಲಾಯಿತು.

ನಾವು ಮಾಡಿಕೊಂಡಿರುವ ನಿಪಿ-2 ಕ್ಕಾಗಲಿ ಈ ದಾವೆಯ ಪ್ರತಿವಾದಿ ಪಕ್ಷಗಾರರಲ್ಲ ಮತ್ತು ಸಾಕ್ಷಿದಾರರು ಅಲ್ಲ ಎಂದರೆ ಸರಿ.ಸರ್ವೆ ನಂ 76 ರ ಪಶ್ಚಿಮದ ಚೆಕ್ಕುಬಂದಿ ನಿಡಿ-1 ರ ಪ್ರಕಾರ ಏನು ಬರುತ್ತದೆ ಎಂದು ನಾನು ನೋಡಿದ್ದೇನೆ. ನಾನು ಈ ದಾವೆಯನ್ನು 6 ಗುಂಟೆ ಜಮೀನಿಗಾಗಿ ಹೂಡಿರುತ್ತೇನೆ. ಈ ದಾವೆಯನ್ನು 3 ಗುಂಟೆ ಜಮೀನಿನಲ್ಲಿ 40 ಇಂಟು 20 ಅಡಿ ಜಾಗಕ್ಕಾಗಿ ಮಾತ್ರ ಹೂಡಿರುತ್ತೇನೆ ಎಂದರೆ ಸರಿ.ಸದರಿ 6 ಗುಂಟೆ ಜಮೀನಿನ ಚೆಕ್ಕುಬಂದಿ ಪೂರ್ವಕ್ಕೆ ವಾದಿಯ ಮನೆ, ಪಶ್ಚಿಮಕ್ಕೆ ರಸ್ತೆ , ಉತ್ತರಕ್ಕೆ ವಾದಿಯ ಮನೆ ಮತ್ತು ದೇವಸ್ಥಾನದ ಜಾಗ , ದಕ್ಷಿಣಕ್ಕೆ ಓಂಕಾರಪ್ಪನ ಜಾಗ. ಈ ಚೆಕ್ಕುಬಂದಿಯಲ್ಲಿನ ಆಸ್ತಿಗೆ ನಾನು ದಾವೆ ಹೂಡಿರುತ್ತೇನೆ. ನನ್ನ ಅಣ್ಣನಾದ ವಾದಿಗೆ ನಿಪಿ-2 ರಂತೆ ಬಂದ ಆಸ್ತಿಯ ಪಶ್ಚಿಮಕ್ಕೆ ತಂತಿ ಬೇಲಿ ಇದೆ ಎಂದರೆ ಸರಿಯಲ್ಲ.

ಸಾಕ್ಷಿಗೆ ಈಗ ಒಂದು ಫೋಟೋವನ್ನು ತೋರಿಸಲಾಗಿ ಸದರಿ ಫೋಟೋದಲ್ಲಿ ಕಾಣಿಸುತ್ತಿರುವ ಮನೆ ವಾದಿಯದು ಎಂದು ಗುರುತಿಸಿರುತ್ತಾರೆ. ಅದರ ಪಶ್ಚಿಮ ಭಾಗಕ್ಕೆ ತಂತಿಬೇಲಿ ಯಾರು ಹಾಕಿರುತ್ತಾರೆ ಎಂದರೆ ಸಾಕ್ಷಿ ನಾವೇ ಕಲ್ಲು ನಿಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ. ನಮ್ಮ ಪಶ್ಚಿಮ ಭಾಗಕ್ಕೆಇರುವ ತಂತಿಬೆಲಿಯ ಕಂಬಗಳು ಮತ್ತು ತಂತಿಗಳ ಮೇಲೆ ಗಿಡಗಳು ಬೆಳೆದಿದೆ ಎಂದರೆ ಸರಿ. ಸದರಿ ತಂತಿಬೇಲಿ 5-6 ವರ್ಷದಿಂದ ಇದೆ. ಹಾಗಾಗಿ ನಾವು ನಮ್ಮ ಪಶ್ಚಿಮದ ಗಡಿಯನ್ನು ಗುರುತಿಸಿಕೊಂಡು ತಂತಿಬೇಲಿಯನ್ನು ಹಾಕಿರುತ್ತೇವೆ ಎಂದರೆ ಸಾಕ್ಷಿ ತಂತಿಬೇಲಿಯನ್ನು ನಾವೇ ಹಾಕಿರುತ್ತೆವೆ ಆದರೆ ಗಡಿ ಗುರುತಿಸಿಲ್ಲ ಎಂದು ನುಡಿಯುತ್ತಾರೆ. ತಂತಿಬೇಲಿಯಿಂದ ಪೂರ್ವಕ್ಕೆ ನನ್ನ ಅಣ್ಣನ/ ವಾದಿಯ ಮನೆಯವರೆಗೆ ಪೂರ್ವ-ಪಶ್ಚಿಮ 20 ಅಡಿ ಬರುತ್ತದೆ. ನನ್ನ ಅಣ್ಣನ ಮನೆ ಪೂರ್ವ ಪಶ್ಚಿಮವಾಗಿ 40 ಅಡಿ ಬರುತ್ತದೆ. ನಮ್ಮ ಅಣ್ಣನ ಮನೆಯ ಪೂರ್ವ ಭಾಗಕ್ಕೆ ಪೂರ್ವ-ಪಶ್ಚಿಮವಾಗಿ 12 ಅಡಿ ಖಾಲಿ ಜಾಗ ಇದೆ. ನಮ್ಮ ಅಣ್ಣ/ವಾದಿಯ ಮನೆ , ಖಾಲಿ ಜಾಗ ಎಲ್ಲಾ ಸೇರಿಸಿ ಉತ್ತರ-ದಕ್ಷಿಣವಾಗಿ 60 ಅಡಿ ಇದೆ.

(ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ.ಚನ್ನಗಿರಿ.